
ಮಕ್ಕಳಿಗಾಗಿ

## ಪಂಚತಂತ್ರ ಕಥೆ

### ಕೊಕ್ಕರೆಯ ಮೂರ್ಖತನ



ಒಂದು ಕಾಡಿನಲ್ಲಿ ಒಂದು ವಟವೃಕ್ಷವಿತ್ತು. ಅದರ ಪೊದರಿನಲ್ಲಿ ಕೃಷ್ಣಸರ್ಪ. ರೆಕ್ಕೆ ಬಲಿಯದ ಕೊಕ್ಕರೆ ಮರಿಗಳನ್ನು ಅದು ತಿಂದುಹಾಕುತ್ತಿತ್ತು. ಕೊಕ್ಕರೆಯು ಹೀಗೆ ತನ್ನೆಲ್ಲ ಮರಿಗಳನ್ನೂ ಕಳೆದುಕೊಂಡಿತು. ಸರೋವರದ ತೀರದಲ್ಲಿ ತಲೆಬಾಗಿಸಿಕೊಂಡು, ಕಣ್ಣೀರು ಸುರಿಸುತ್ತ ಕುಳಿತಿತ್ತು. ಆಗ ಒಂದು ಏಡಿಯು ಅದರ ದುಃಖದ ಕಾರಣವನ್ನು ತಿಳಿದು, ಒಂದು ಸಲಹೆ ಕೊಟ್ಟಿತು.

ಆ ಸಲಹೆಯಂತೆ, ಕೊಕ್ಕರೆಯು ಮುಂಗಸಿಯ ಬಿಲದ ಹತ್ತಿರ ಸ್ವಲ್ಪ ಮಾಂಸದ ತುಂಡನ್ನು ಹಾಕಿತು. ಅಲ್ಲಿಂದ ಹಿಡಿದು, ಕೃಷ್ಣಸರ್ಪದ ಪೊಟರೆಯ ತನಕ ಮಾಂಸದ ತುಣುಕುಗಳನ್ನು ಹಾಕುತ್ತ ಹೋಯಿತು. ಮುಂಗುಸಿಯು ಮಾಂಸದ ತುಣುಕುಗಳನ್ನು ತಿನ್ನುತ್ತ ಬಂದು ಕೃಷ್ಣಸರ್ಪದ ಪೊಟರೆಯ ಹತ್ತಿರ ಬಂದಿತು. ಅಲ್ಲಿದ್ದ ಕೃಷ್ಣಸರ್ಪವನ್ನು ಕೊಂದುಹಾಕಿತು.

ಮುಂಗುಸಿಯು ಅಲ್ಲಿಗೇ ನಿಲ್ಲಲಿಲ್ಲ. ಮರವನ್ನು ಏರಿ, ಅಲ್ಲಿದ್ದ ಎಲ್ಲ ಮರಿ ಕೊಕ್ಕರೆಗಳನ್ನೂ ತಿಂದು ಹಾಕಿತು. ಹೀಗೆ ಕೊಕ್ಕರೆಗಳ ವಂಶವೇ ನಾಶವಾಯಿತು.

ಈ ಕಥೆಯ ನೀತಿ ಹೀಗಿದೆ: **ಉಪಾಯವನ್ನು ಮಾಡುವುದೇನೋ ಒಳ್ಳೆಯದೇ. ಆದರೆ, ಅದರ ಪೂರ್ವಾಪರಗಳನ್ನು ವಿಚಾರಿಸಬೇಕು. ಬುದ್ಧಿವಂತಿಕೆಯಿಂದ ಯಾವುದೇ ಕಾರ್ಯವನ್ನು ಮಾಡಬೇಕು. ಇಲ್ಲದಿದ್ದರೆ, ಆಪತ್ತಿಗೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ.**

## ಸಂಸ್ಕೃತಿ ಪರಿಚಯ

### ರಾಮಾಯಣ

ರಾಮಾಯಣ ಸಂಸ್ಕೃತ ಭಾಷೆಯ ಆದಿಕಾವ್ಯ. ಅದನ್ನು ರಚಿಸಿದ ವಾಲ್ಮೀಕಿ ಆದಿಕವಿ. ಈ ಮಹಾಕಾವ್ಯದಲ್ಲಿ ವಾಲ್ಮೀಕಿಯು ರಾಮನನ್ನು 'ಮರ್ಯಾದಾ ಪುರುಷೋತ್ತಮ' ಎಂದು ವರ್ಣಿಸುತ್ತಾರೆ. ಇದರಲ್ಲಿ ೨೪,೦೦೦ ಶ್ಲೋಕಗಳಿವೆ. ಇವು ಏಳು ಕಾಂಡಗಳಲ್ಲಿ ಅಡಕವಾಗಿವೆ. ರಾಮಾಯಣವು ಹಲವಾರು ಆದರ್ಶ ಪಾತ್ರಗಳನ್ನು ನಮ್ಮ ಮುಂದೆ ಇರಿಸುತ್ತದೆ. ರಾಮ ಆದರ್ಶಪುತ್ರ, ಸೀತೆ ಆದರ್ಶ ಪತ್ನಿ, ಆದರ್ಶ ಸಹೋದರ ಲಕ್ಷ್ಮಣ, ಆದರ್ಶ ಮಿತ್ರ ಸುಗ್ರೀವ, ಆದರ್ಶ ಭಕ್ತ ಹನುಮಂತ – ಹೀಗೆ ಒಂದೊಂದು ಪಾತ್ರವೂ ಜೀವಂತವಾಗಿ ಮೂಡಿಬಂದಿದೆ. ಅದಲ್ಲದೆ, ರಾಮಾಯಣವು ಅನೇಕ ಜೀವನ ಮೌಲ್ಯಗಳನ್ನು ನಮಗೆ ಬೋಧಿಸುತ್ತದೆ: ಸತ್ಯಪರಿಪಾಲನೆ, ಕಷ್ಟಸಹಿಷ್ಣುತೆ, ಧರ್ಮಪರಿಪಾಲನೆ, ಸಾಧುರಕ್ಷಣೆ, ದುಷ್ಟನಿಗ್ರಹ, ಸ್ನೇಹ, ಪ್ರೀತಿ, ಭ್ರಾತೃತ್ವ ಇವು ಕೆಲವು ಮೌಲ್ಯಗಳು. ಇವೆಲ್ಲವನ್ನೂ ರಾಮ ಮತ್ತು ಇತರ ಪಾತ್ರಗಳಲ್ಲಿ ಕಾಣುತ್ತೇವೆ. ಶ್ರೀರಾಮನನ್ನು ಎಲ್ಲ ಒಳ್ಳೆಯ ಗುಣಗಳ ಪ್ರತಿರೂಪವಾಗಿ ವಾಲ್ಮೀಕಿ ವರ್ಣಿಸುತ್ತಾರೆ. ಅದಕ್ಕಾಗಿಯೇ " **ರಾಮೋ ವಿಗ್ರಹವಾನ್ ಧರ್ಮಃ** " – ರಾಮನು ಧರ್ಮದ ಮೂರ್ತಿಯಾಗಿದ್ದಾನೆ ಎಂದು ಅವರು ಬಣ್ಣಿಸಿದ್ದಾರೆ.

ವಾಲ್ಮೀಕಿ ರಾಮಾಯಣವು ಭಾರತದ ಧಾರ್ಮಿಕ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಬೀರಿರುವ ಪ್ರಭಾವ ಅಗಾಧವಾದುದು. ರಾಮನನ್ನು ವಿಷ್ಣುವಿನ ಅವತಾರವೆಂದು ಪರಿಗಣಿಸಿ ಜನರು ಪೂಜಿಸುತ್ತಾರೆ. ಸಂಸ್ಕೃತದಲ್ಲಿ ಅಧ್ಯಾತ್ಮ ರಾಮಾಯಣ, ಚಂಪೂ ರಾಮಾಯಣ, ಅದ್ಭುತ ರಾಮಾಯಣ, ಆನಂದ ರಾಮಾಯಣ ಮುಂತಾದ ಗ್ರಂಥಗಳಿವೆ. ಕನ್ನಡದಲ್ಲಿ ರಾಮಚಂದ್ರ ಚರಿತ ಪುರಾಣ, ತೊರವೆ ರಾಮಾಯಣ, ರಾಮಾಯಣ ದರ್ಶನಂ ಮೊದಲಾದ ಮಹಾಕಾವ್ಯಗಳಿವೆ. ಇವೆಲ್ಲಕ್ಕೂ ವಾಲ್ಮೀಕಿಯ ರಾಮಾಯಣವೇ ಆಕರವಾಗಿದೆ. ಹಿಂದಿಯಲ್ಲಿ ತುಳಸೀದಾಸರು ರಚಿಸಿರುವ '**ಶ್ರೀರಾಮಚರಿತಮಾನಸ**' ವಂತೂ ಉತ್ತರ ಭಾರತದಲ್ಲಿ ಬಹಳ ಪ್ರಸಿದ್ಧವಾಗಿದೆ.

ರಾಮಾಯಣವು ಪೂರ್ಣಜೀವನದ ಬಹುಮುಖ ಚಿತ್ರವನ್ನು ನಮಗೆ ನೀಡುತ್ತದೆ. ರಾಮಾಯಣದಲ್ಲಿ ಕಠಿಣವಾದ ಅನೇಕ ಪ್ರಸಂಗಗಳು ಬರುತ್ತವೆ. ಅಂಥ ಸನ್ನಿವೇಶಗಳನ್ನು ಎದುರಿಸಿಯೂ ಶ್ರೀರಾಮ ಮತ್ತಿತರರು ಧರ್ಮಮಾರ್ಗದಿಂದ ಹಿಂದೆ ಸರಿಯದೆ, ಕೊನೆಗೆ ಹೇಗೆ ಪಾರಾದರೆಂಬುದನ್ನು ಇದರಲ್ಲಿ ತೋರಿಸಲಾಗಿದೆ. ಧರ್ಮಕಾರ್ಯಗಳ ಮೂಲಕ ತೋರಿಬರುವ ಸಾತ್ವಿಕ ಶಕ್ತಿಯು ಹೇಗೆ ದುಷ್ಟತನವನ್ನು ತೊಡೆದುಹಾಕಿತು ಎಂದು ತೋರಿಸಿಕೊಡುವುದೇ ಈ ಕಾವ್ಯದ ಮುಖ್ಯ ಉದ್ದೇಶವಾಗಿದೆ.

**(ಮುಂದಿನ ತಿಂಗಳು: ಮಹಾಭಾರತ)**


**ಸ್ವಾಮಿ ವಿವೇಕಾನಂದರ ಪ್ರಕಾರ**
**ಶಿಕ್ಷಣದಿಂದ ಕಲಿಯಬೇಕಾದ ಗುಣಗಳು**
**ಸ್ವಾವಲಂಬನೆ**

ಟ್ರೂಮನ್ ಅಮೆರಿಕೆಯ ಅಧ್ಯಕ್ಷರಾಗಿದ್ದರು. ಅವರು ಅಧಿಕಾರದಲ್ಲಿ ಇದ್ದಾಗಲೂ ಸರಳ ಜೀವನವನ್ನು ನಡೆಸುತ್ತಿದ್ದರು. ತಮ್ಮ ನೌಕರರನ್ನು ಪ್ರೀತಿವಿಶ್ವಾಸಗಳಿಂದ ನೋಡಿಕೊಳ್ಳುತ್ತಿದ್ದರು; ತಮ್ಮ ಸ್ವಂತ ಕೆಲಸಗಳನ್ನು ತಾವೇ ಮಾಡುತ್ತಿದ್ದರು. ಅದಕ್ಕಾಗಿ ಸ್ವಲ್ಪವೂ ಸಂಕೋಚ ಪಡುತ್ತಿರಲಿಲ್ಲ.


ಅವರು ರಾತ್ರಿ ಮಲಗುವ ಮುಂಚೆ ಒಳ ಅಂಗಿ ಮತ್ತು ಕಾಲುಚೀಲಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಈ ಬಗ್ಗೆ ಅವರ ಸೇವಕರು ಆಕ್ಷೇಪ ವ್ಯಕ್ತಪಡಿಸಿದರು. ಅದಕ್ಕೆ ಟ್ರೂಮನ್ ಹೀಗೆ ಹೇಳುತ್ತಿದ್ದರು:

**"ಇದನ್ನು ನನ್ನ ತಾಯಿ ನಾನು ಸಣ್ಣ ವಯಸ್ಸಿನವನಾಗಿದ್ದಾಗಿನಿಂದಲೂ ಅಭ್ಯಾಸ ಮಾಡಿಸಿದ್ದಾಳೆ. ಈ ಬಗ್ಗೆ ನೀವೆಂದೂ ಚಿಂತಿಸಬೇಕಾಗಿಲ್ಲ."**

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: **ಯಾವ ಬಗೆಯ ಶಿಕ್ಷಣದಿಂದ ಶೀಲ ರೂಪುಗೊಳ್ಳುವುದೋ, ಮನಶ್ಶಕ್ತಿ ವೃದ್ಧಿಯಾಗುವುದೋ ಮತ್ತು ಯಾವುದರಿಂದ ನಮ್ಮ ಸ್ವಂತ ಕಾಲ ಮೇಲೆ ನಾವು ನಿಂತುಕೊಳ್ಳಬಲ್ಲೆವೋ ಅಂತಹ ಶಿಕ್ಷಣ ನಮಗೆ ಆವಶ್ಯಕ.** (ಮುಂದಿನ ತಿಂಗಳು: ಚಾರಿತ್ರ್ಯ)



(ಕಾಲ್ಪನಿಕ ಚಿತ್ರ)



ಮುಲ್ಲಾ ನಸ್ರುದ್ದೀನ್ ಜೊತೆ ಒಮ್ಮೆ ಅವನ ಹೆಂಡತಿ ಜಗಳ ಮಾಡುತ್ತಿದ್ದಳು. ಜಗಳ ನಿಲ್ಲಲೇ ಇಲ್ಲ. ಕಡೆಗೆ ಮುನಿಸಿಕೊಂಡ ಅವನ ಹೆಂಡತಿ ಮಾತು ನಿಲ್ಲಿಸಿದಳು. ಐದಾರು ದಿನಗಳಾದರೂ ಒಬ್ಬರಿಗೊಬ್ಬರು ಮಾತನಾಡಲೇ ಇಲ್ಲ. ಮುಲ್ಲಾ ಮಾತನಾಡಿಸಲು ಹೋದರೂ, ಅವಳು ಬಾಯಿ ಬಿಡಲೇ ಇಲ್ಲ.

ಒಂದು ದಿನ ಕತ್ತಲಾಗುತ್ತಿತ್ತು. ಮುಲ್ಲಾ ಒಂದು ಮೋಂಬತ್ತಿಯನ್ನು ಹಚ್ಚಿಕೊಂಡು, ಮನೆಯ ಮೂಲೆಮೂಲೆಗಳಲ್ಲೂ ಏನನ್ನೋ ಹುಡುಕತೊಡಗಿದ. ಒಂದಾದರ ಮೇಲೊಂದು ಮನೆಯ ಎಲ್ಲಾ ಕೊಠಡಿಗಳನ್ನು ಹುಡುಕತೊಡಗಿದ. ಹೆಂಡತಿಗೆ ಬಹಳ ಕುತೂಹಲವಾಗಿ, ಕೇಳಿಯೇ ಬಿಟ್ಟಳು: "ಏನಿದು? ಏನು ಹುಡುಕುತ್ತಿದ್ದೀಯೆ?"

ಆಗ ಮುಲ್ಲಾ ಅವಳ ಕಡೆ ತಿರುಗಿ ನೋಡಿ, ನಸುನಗುತ್ತಾ ಹೇಳಿದ: "ನಿನ್ನ ಮಾತನಾಡುವ ಶಕ್ತಿಯೇ ಎಲ್ಲೋ ಕಳೆದುಹೋಯಿತೇನೋ ಎಂದೆನಿಸಿತ್ತು. ಅದನ್ನೇ ಹುಡುಕುತ್ತಿದ್ದೆ. ಅಂತೂ ಅದು ಈಗ ಸಿಕ್ಕಿಬಿಟ್ಟಿತು." ಮುಂದೆ ಗಂಡಹೆಂಡತಿಯರಿಬ್ಬರೂ ಮಾತನಾಡಲು ಆರಂಭಿಸಿದರು. ಮುಲ್ಲಾ ಎಷ್ಟು ಚತುರತೆಯಿಂದ ಹೆಂಡತಿಯ ಮುನಿಸನ್ನು ನಿವಾರಣೆ ಮಾಡಿದ, ನೋಡಿ! ✪